ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿರವರ ಕಚೇರಿ ದೂರವಾಣಿ ಸಂಖ್ಯೆ: 080-22971578
ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು,
ಬೆಂಗಳೂರು ಪಶ್ಚಿಮ ವಲಯ,
ರಾಜಾಜಿನಗರ, ಬೆಂಗಳೂರು-10.

ಸಂಖ್ಯೆ:07/CC/ಪ್ರಾಅಅ/ಬೆಂಪವ/2025 ದಿನಾಂಕ: 31-10-2025

ಗೆ,
ಮೆ॥ ಅರವಿಂದ್ ಇಂಟರ್‌ನ್ಯಾಷನಲ್ ಸ್ಕೂಲ್,
ಗಿರಿಗೌಡನಪಾಳ್ಯ ಗೇಟ್,
ಮದ್ದೂರು ರೋಡ್,
ಕುಣಿಗಲ್,
ತುಮಕೂರು-572130.

ಮಾನ್ಯರೆ,

ವಿಷಯ: **ಮೆ॥ ಅರವಿಂದ್ ಇಂಟರ್‌ನ್ಯಾಷನಲ್ ಸ್ಕೂಲ್**, ಗಿರಿಗೌಡನಪಾಳ್ಯ ಗೇಟ್, ಮದ್ದೂರು ರೋಡ್, ಕುಣಿಗಲ್, ತುಮಕೂರು-572130 ಇಲ್ಲಿ ನಿರ್ಮಿಸಿರುವ ಶಾಲಾ ಕಟ್ಟಡಕ್ಕೆ **"ಸಮಾಪನ ಪತ್ರ"** ನೀಡುವ ಬಗ್ಗೆ.

ಉಲ್ಲೇಖ: 1) ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಅಗ್ನಿ ಸಲಹಾ ಪತ್ರ ಸಂ.ಜಿಬಿಸಿ(2)1578/2024 ಇ-ಆಫೀಸ್ ಕಂಪ್ಯೂಟರ್ ನಂ. 32849 ದಿನಾಂಕ: 16-07-2025.
2) ನಿಮ್ಮ ಪತ್ರ ದಿನಾಂಕ: 31-07-2025.

<<<<<<>>>>>>

**ಮೆ॥ ಅರವಿಂದ್ ಇಂಟರ್‌ನ್ಯಾಷನಲ್ ಸ್ಕೂಲ್**, ಗಿರಿಗೌಡನಪಾಳ್ಯ ಗೇಟ್, ಮದ್ದೂರು ರೋಡ್, ಕುಣಿಗಲ್, ತುಮಕೂರು-572130 ಇಲ್ಲಿ ನಿರ್ಮಿಸಿರುವ **20.70 ಮೀಟರ್** ಎತ್ತರದ ನೆಲಹಂತ ಮತ್ತು 05 ಮೇಲಂತಸ್ತುಗಳನ್ನು ಹೊಂದಿರುವ **ಮೆ॥ ಅರವಿಂದ್ ಇಂಟರ್‌ನ್ಯಾಷನಲ್ ಸ್ಕೂಲ್** ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ದಿನಾಂಕ: 16-07-2025 ರಂದು ನಿಮ್ಮ ಕೋರಿಕೆಯಂತೆ ಅಗ್ನಿ ಸಲಹಾ ಪತ್ರ ನೀಡಲಾಗಿದೆ.

ಉಲ್ಲೇಖ (2) ರ ನಿಮ್ಮ ಪತ್ರದಲ್ಲಿ, ಸದರಿ ಶಾಲಾ ಕಟ್ಟಡದಲ್ಲಿ ಅಗ್ನಿಶಮನ ಉಪಕರಣಗಳ ಅಳವಡಿಕೆ ಕಾರ್ಯ ಮುಗಿದಿದ್ದು, ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಮಾಪನ ಪತ್ರ ನೀಡುವಂತೆ ಕೋರಿರುತ್ತೀರಿ.

Office of the Regional Fire Officer, Bengaluru West Range, Blr-10.
Date 31/10/2025

ನಿಮ್ಮ ಕೋರಿಕೆಯಂತೆ, **ಜಿಲ್ಲಾ ಅಗ್ನಿಶಾಮಕ ಅಧಿಕಾರಿ, ತುಮಕೂರು ಅಗ್ನಿಶಾಮಕ ಠಾಣೆ, ತುಮಕೂರು** ರವರು ದಿನಾಂಕ: 16-10-2025 ರಂದು ಗಿರಿಗೌಡನಪಾಳ್ಯ ಗೇಟ್, ಮದ್ದೂರು ರೋಡ್, ಕುಣಿಗಲ್, ತುಮಕೂರು-572130 ಇಲ್ಲಿ ನಿರ್ಮಿಸಿರುವ ಶಾಲಾ ಕಟ್ಟಡವನ್ನು ಪರಿಶೀಲನೆ ಮಾಡಿ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯು ನೀಡಿರುವ ಸಲಹಾ ಪತ್ರದಂತೆ, ಅಗ್ನಿ ರಕ್ಷಣೆ ಮತ್ತು ನಿಯಂತ್ರಣ, ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಶಾಲಾ ಕಟ್ಟಡದಲ್ಲಿ ಪೂರ್ಣವಾಗಿ ಅನುಷ್ಠಾನಗೊಳಿಸಿರುವುದಾಗಿ ತಿಳಿಸಿರುತ್ತಾರೆ.

ಆದ್ದರಿಂದ, ಗಿರಿಗೌಡನಪಾಳ್ಯ ಗೇಟ್, ಮದ್ದೂರು ರೋಡ್, ಕುಣಿಗಲ್, ತುಮಕೂರು-572130 ಇಲ್ಲಿ ನಿರ್ಮಿಸಿರುವ 20.70 ಮೀಟರ್ ಎತ್ತರದ ನೆಲಹಂತ ಮತ್ತು 05 ಮೇಲಂತಸ್ತುಗಳನ್ನು ಮಾತ್ರ ಹೊಂದಿರುವ **ಮೆ॥ ಅರವಿಂದ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಶಾಲಾ** ಕಟ್ಟಡಕ್ಕೆ ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯ ಸಲಹಾ ಪತ್ರ, ಸಂಖ್ಯೆ: ಸಂ.ಜಿಬಿಸಿ(2)1578/2024 ಇ-ಆಫೀಸ್ ಕಂಪ್ಯೂಟರ್ ನಂ. 32849 ದಿನಾಂಕ:16-07-2025 ರಲ್ಲಿ ತಿಳಿಸಿರುವಂತೆ ಅಗ್ನಿರಕ್ಷಣೆ ಮತ್ತು ನಿಯಂತ್ರಣ ಹಾಗೂ ಅಗ್ನಿನಂದಿಸುವ ಉಪಕರಣಗಳ ಅಳವಡಿಕೆ ಹಾಗೂ ರಕ್ಷಣಾ ಕ್ರಮಗಳನ್ನು ಕಟ್ಟು ನಿಟ್ಟಾಗಿ ಪಾಲಿಸಬೇಕೆಂದು ಹಾಗೂ ಅಗ್ನಿಶಮನ ಉಪಕರಣಗಳನ್ನು ಸುಸ್ಥಿತಿಯಲ್ಲಿಡಬೇಕೆಂಬ ಷರತ್ತಿನ ಮೇಲೆ ಸಮಾಪನ ವರದಿ ಪ್ರಮಾಣ ಪತ್ರವನ್ನು ಅಗ್ನಿಶಾಮಕ ಮತ್ತು ತುರ್ತು ಸೇವಾ ಇಲಾಖೆಯಿಂದ ನೀಡಲಾಗಿದೆ.

**ಈ ಸಮಾಪನ ಪ್ರಮಾಣ ಪತ್ರವು ದಿನಾಂಕ: 30-10-2027 ರವರೆಗೆ (02 ವರ್ಷ) ಚಾಲ್ತಿಯಲ್ಲಿರುತ್ತದೆ, ತದನಂತರ ಈ ಸಮಾಪನ ಪ್ರಮಾಣ ಪತ್ರವನ್ನು ನವೀಕರಿಸುವಂತೆ ತಿಳಿಸಲಾಗಿದೆ.**

ಹಾಗೆಯೇ ಒಂದು ವೇಳೆ ಯಾವುದೇ ಸಂದರ್ಭದಲ್ಲಿ ಇಲಾಖೆಯ ಶಿಫಾರಸ್ಸಿನನ್ವಯ ಅಳವಡಿಸಿರುವ ಅಗ್ನಿ ನಿವಾರಣೆ ಹಾಗೂ ಅಗ್ನಿಶಮನ ಉಪಕರಣಗಳು ಸುಸ್ಥಿತಿಯಲ್ಲಿರದೇ ಇರುವುದು ಕಂಡು ಬಂದರೆ ಅಥವಾ ರಕ್ಷಣಾ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸದಿದ್ದರೆ ಅಥವಾ ಹಾಲಿ ಇರುವ ಮೇಲಂತಸ್ತುಗಳನ್ನು ಹೊರತುಪಡಿಸಿ ಹೆಚ್ಚುವರಿ ಖಾಯಂ/ತಾತ್ಕಾಲಿಕ ಮೇಲಂತಸ್ತುಗಳನ್ನು ನಿರ್ಮಿಸಿದರೆ ಈ **'ಸಮಾಪನ ಪ್ರಮಾಣ ಪತ್ರವು ಅನೂರ್ಜಿತಗೊಳ್ಳುವುದು** ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಮುಂದಿನ ಕ್ರಮಕೈಗೊಳ್ಳಲಾಗುವುದು ಎಂಬುದಾಗಿ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ

31/10/2025

ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ
ಬೆಂಗಳೂರು ಪಶ್ಚಿಮ ವಲಯ
ರಾಜಾಜಿನಗರ, ಬೆಂಗಳೂರು-10.

Office of the Regional Fire Officer
Date 31/10/2025